


# ಬದಲಾದ ಕಥಾಕಾಲ

ನಾಂದಿ ನುಡಿ

ಅನಾದಿಯಿಂದಲೂ ನಮ್ಮನ್ನು ಒಂದಲ್ಲ ಒಂದು ಕತೆಗಳು ಪೊರೆಯುತ್ತಲೇ ಬಂದಿವೆ. ಬಾಲ್ಯದಲ್ಲಿ ಕೇಳಿದ ಜನಪದ ಹಾಗೂ ಮಹಾಕಾವ್ಯಗಳ ಕತೆಗಳು, ಕೊಂಚ ದೊಡ್ಡವರಾಗುತ್ತಿದ್ದಂತೆ ಊರ ಸುತ್ತಲಿನ ಕತೆಗಳು, ಪ್ರಸಂಗಗಳು ನಮ್ಮಲ್ಲಿ ಕುತೂಹಲ ಹುಟ್ಟಿಸುವುದು ಮಾತ್ರವಲ್ಲ, ತುದಿಗಾಲಿನ ಮೇಲೆ ನಿಲ್ಲಿಸುತ್ತಲೂ ಇದ್ದವು. ಎಂದಿನಂತೆ ದೊಡ್ಡಾಟ, ಯಕ್ಷಗಾನ, ಕಂಪನಿ ನಾಟಕಗಳು ತಮ್ಮ ಕತೆಗಳ ರೋಮಾಂಚಕ ಹರಿವಿನಲ್ಲಿ ನೋಡುಗರನ್ನು ತೇಲಿಸುತ್ತಿದ್ದವು. ಇವುಗಳ ಜೊತೆಗೇ ಸಿನಿಮಾ ತನ್ನ ಕತೆ ಹೇಳುವ, ಕಣ್ಣ ಮುಂದೆಯೇ ಜೀವಂತ ಚಿತ್ರಗಳನ್ನು ಮೂಡಿಸುವ ಮಾಂತ್ರಿಕತೆಯಿಂದ ಜನರನ್ನು ಸೆಳೆದು ತನ್ನ ಸೆರಗಿನಲ್ಲಿ ಕಟ್ಟಿಹಾಕಿತು. ಸಿನಿಮಾ ನಾಯಕ, ನಾಯಕಿಯರು ನೋಡುಗರಿಗೆ ಆಗಾಗ ಅಭಯ ನೀಡುವ, ಎಡವಿದಾಗ ಎದ್ದುನಿಲ್ಲಿಸುವ, ಅವರ ಬದುಕಿನೊಂದಿಗೇ ಹೆಜ್ಜೆಹಾಕುವ, ಬೇಕಾದಾಗ ನಿಲುಕುವ ದೈನಿಕದ ಸಹಜೀವಿಗಳಾದರು. ಯಾವುದೇ ಕಥಾಪಾತ್ರಗಳಿರಲಿ ಅವು ಅನುಗಾಲವೂ ಜನರನ್ನು ಸಲಹಿವೆ; ಗೆಳೆಯ/ಗೆಳತಿಯರಂತೆ ಹೆಗಲ ಮೇಲೆ ಕೈಹಾಕಿವೆ. ಇದರಲ್ಲಿ ಸಾಹಿತ್ಯದ ಕೊಡುಗೆ ಸಣ್ಣದೇನಲ್ಲ. ನೂರಾರು ಕಾದಂಬರಿ, ಕತೆಗಳಿಂದ ಬದುಕಿನಲ್ಲಿ ಸ್ಫೂರ್ತಿ ಪಡೆದವರು, ಪ್ರಭಾವಿತರಾದವರು ಎಲ್ಲೆಡೆ ಇದ್ದಾರೆ. ಬಹುಶಃ ಕತೆಗಳಿಲ್ಲದೆ ಮನುಷ್ಯ ಬದುಕಲಾರ; ಬದುಕಿನ ಆಳ–ವಿಸ್ತಾರ ಹಾಗೂ ಅರ್ಥಪೂರ್ಣತೆಯನ್ನು ಮನಗಾಣಲಾರ.

ಇಂತಹ ಕತೆಗಳು ತಮ್ಮ ಸ್ವರೂಪವನ್ನು ಬದಲಿಸಿವೆ; ಇಲ್ಲ, ಅವುಗಳ ಜಾಗಕ್ಕೆ ಕತೆಯ ಮುಸುಕು ಹೊದ್ದ, ವೇಷಾಂತರ ಮಾಡಿದ ಬೇರೆ ಸಂಗತಿಗಳು ಬಂದು ಕೂತಿವೆ. ಹಣ, ಧರ್ಮ, ಅಧಿಕಾರ, ರಾಜಕೀಯ, ಅಭಿವೃದ್ಧಿ, ಜಾತೀಯತೆ, ಭ್ರಷ್ಟಾಚಾರ – ಹೀಗೆ ಯಾವುದೇ ಸ್ವರೂಪ ಅದಕ್ಕೆ ಇರಬಹುದು. ಅಂತಹ ವಿರಾಟ್ ಕಥನಗಳು ನಮ್ಮನ್ನು ಆಳಲು ಶುರು ಮಾಡಿವೆ. ಜೊತೆಗೆ ನಾವು ಏನನ್ನು ಕಾಣಬೇಕು, ಕೇಳಬೇಕು, ಕೊನೆಗೆ ಏನನ್ನು ಭಾವಿಸಬೇಕು, ಸಂವೇದಿಸಬೇಕು ಎಂಬುದನ್ನು ಅವೇ ನಿರ್ಧರಿಸುವ ಕಾಲ ಇದು. ಸುಳ್ಳಿನ ಮರೆಯಲ್ಲಿರುವ, ತನ್ನ ಜೀವಕ್ಕೆ ನೆರವಾಗಬೇಕಾದ ನಿಜವಾದ ಕಥನಗಳನ್ನು ಕಾಣಲಾಗದೇ ಮನುಷ್ಯ ತಬ್ಬಲಿಯಾಗಿದ್ದಾನೆ.

ನಮ್ಮನ್ನು ದರ್ಶಿಸುವ, ಯೋಚನೆಗೆ ಹಚ್ಚುವ ಈ ಕಾಲದ ಕಥನ ಯಾವುದು, ಅದರ ಸ್ವರೂಪ ಏನು? ಎಂಬುದನ್ನು ಕನ್ನಡದ ಲೇಖಕರು ಈ ಸಂಚಿಕೆಯಲ್ಲಿ ಹಂಚಿಕೊಂಡಿದ್ದಾರೆ. 'ಈ ಕಾಲದ ಕಥನ' ಈ ಸಲದ 'ಮಯೂರ'ದ ವಿಶೇಷ.



**ಸಂದೀಪ ನಾಯಕ**